ಶಾಂತಿಯು ನೆಲೆಸಬೇಕಾದರೆ If you want to give protection, if you want to give signal to the people and to your police authorities, you must be honest enough to admit that there have been lapses ಹಾಗಾದರೆ ಆ ಲ್ಯಾಪ್ಸ್‌ಗಳು ಏನು? ಯಾರು ಅದಕ್ಕೆ ಕಾರಣ? ಎಂಬುದನ್ನು ತಿಳಿದು ಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇವೆ. ಒಂದು ಘಟನೆಯ ಬಗ್ಗೆ ಅಂದರೆ ಯಡವನಹಳ್ಳಿ ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ತಾವುಗಳು ಆಜ್ಞೆ ಮಾಡಿದ್ದೀರಿ ಅದನ್ನು ನಾವು ಅಪ್ರಿಷಿಯೇಟ್ ಮಾಡುತ್ತೇವೆ. We have appreciated that. If you want further appreciation from us, if you must to see that all the people should praise you, you form a House Committee ನಾವು ಹೋಗಿ ನೋಡಿಕೊಂಡು ಬರುತ್ತೇವೆ. ಅಂಥ ಉದಾಹರಣೆಗಳು ಇವೆ. ರಾಜ್ಯದಲ್ಲಿ ಶಾಂತಿ ನೆಲೆಸಬೇಕಾದರೆ, ರಾಜ್ಯದಲ್ಲಿ ಈ ರೀತಿಯ ಘಟನಾವಳಿಗಳು ನಡೆಯದೇ ಇರಬೇಕಾದರೆ, ರಾಜ್ಯದಲ್ಲಿ ಪೋಲೀಸರು ಅವರ ಕಲಹಾಂತ್ಯದಲ್ಲಿ ಸ್ವೇಚ್ಚಾಚರದಿಂದ ನಡೆಯದೇ ಇರಬೇಕಾದರೆ, ರಾಜ್ಯದಲ್ಲಿನ ಪೋಲೀಸರು ಆಡಳಿತ ಪಕ್ಷದ ಕೈಗೊಂಬೆಗಳಾಗಿ ನಡೆದುಕೊಳ್ಳಬಾರದು ಎಂದು ನಿಮ್ಮ ಮನಸ್ಸಿನಲ್ಲಿ ಇರುವುದಾದರೆ ತಮಗೆ ಅವರುಗಳು ಒಪ್ಪಿಗೆ ಕೊಟ್ಟರೆ ತಾವು ಸದನ ಸಮಿತಿಯನ್ನು ರಚನೆ ಮಾಡಿ. ಆದ್ದರಿಂದ ಸದನ ಸಮಿತಿ ರಚನೆಗೆ ಸರಕಾರದವರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ಒತ್ತಾಯ ಮಾಡಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸರಕಾರವು ಫರ್ಮ್ ಇದೆ. ಕಾನೂನು ವ್ಯವಸ್ಥೆ ಮತ್ತು ಶಾಂತಿ ಕಾಪಾಡುವುದರಲ್ಲಿ ನಮ್ಮ ಪೋಲೀಸರು ಸಮರ್ಥರಿದ್ದಾರೆ. ಅದಕ್ಕಾಗಿ ಸದನ ಸಮಿತಿಯ ಅವಶ್ಯಕತೆ ಇಲ್ಲ. ಅವರು ಕೊಟ್ಟಿರುವ ಒಳ್ಳೆಯ ಸಲಹೆಗಳನ್ನು ನಾವು ಇಂಪ್ಲಿಮೆಂಟ್ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಹೇಳುವುದನ್ನು ಬರೀ ಕೇಳಿಕೊಂಡು ಭಾಷಣ ಮಾಡುವುದಕ್ಕೆ ಹೊರಟಿದ್ದಾರೆ. ಈ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಜನತಾದಳ (ಯು) ಮತ್ತು ಬಿಜೆಪಿ ಪಕ್ಷಗಳ ಮಾನ್ಯ ಸದಸ್ಯರು ಸಭಾತ್ಯಾಗ ಮಾಡುವರು)

ಅಧ್ಯಕ್ಷರು : ಈಗ ಸಭೆಯನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತೇನೆ

(ಸಭೆಯನ್ನು ಮಧ್ಯಂತರ ವಿರಾಮಕ್ಕೆಂದು 2-20 ಗಂಟೆಯಿಂದ 3 ಗಂಟೆ 30 ನಿಮಿಷದವರೆಗೆ ಮುಂದೂಡಲಾಯಿತು.

(ಸದನವು ಮತ್ತೆ 3-50ಕ್ಕೆ ಪ್ರಾರಂಭವಾಯಿತು

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡಲಿರುವ ವಿಚಾರದ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕಾಗುತ್ತದೆ.

ಅಧ್ಯಕ್ಷರು : ಯಾರೋ ಫಾರಿನ್ ಮಿನಿಸ್ಟರ್ಸ್ ಬಂದಿದ್ದಾರೆ ಆದ್ದರಿಂದ ನಾನು ಸ್ವಲ್ಪ ತಡವಾಗಿ ಬರುವುದಾಗಿ ಮುಖ್ಯಮಂತ್ರಿಗಳು ತಿಳಿಸಿರುತ್ತಾರೆ. ಆದ್ದರಿಂದ ಅವರು ಬಂದ ಮೇಲೆ ತಮ್ಮ ವಿಚಾರವನ್ನು